ಇ.ಸಿ.ಎ.1/2019, ಪಿ.ಡಬ್ಲ್ಯೂ: 1 ಹೆಸರುಃ ಗೀತಾ

**ದಿಃ07-10-2024 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದಃ**

1. ಈ ಪ್ರಕರಣದ ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿದಂತಹ ಮಂಜುನಾಥ ಎಂ. ಬಿನ್ ಮುರುಗೇಂದ್ರಪ್ಪ ನಮ್ಮ ಗ್ರಾಮದವರು. ನಾವು ಮತ್ತು ಚಾಸಾ.1 ಅನ್ಯೂನ್ಯತೆಯಿಂದ ಇದ್ದೇವೆ ಎಂದರೆ ಸರಿ. ನನ್ನ ಮಗನಿಗೆ ಬೈಕಿನಲ್ಲಿ ಅಪಘಾತ ಆಗಿದೆ ಎಂದು ಮಂಜುನಾಥ ಎಂ. ಬಿನ್ ಮುರುಗೇಂದ್ರಪ್ಪ ರವರು ಹೊಳಲ್ಕೆರೆ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದರು ಎಂದರೆ ಸರಿ. ನಮ್ಮ ಗ್ರಾಮದ ಸಣ್ಣ ಕೆಂಚಪ್ಪ ಮತ್ತು ನಾಗರಾಜು ರವರು ಅಪಘಾತದಲ್ಲಿ ಗಾಯಗೊಂಡ ನನ್ನ ಮಗನನ್ನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ಹೇಳಿದ್ದರು ಎಂದು ನುಡಿಯುತ್ತಾರೆ.

2. ನನ್ನ ಮಗನಿಗೆ ಅಪಘಾತಪಡಿಸಿದ ಬೈಕಿನ ಸಂಖ್ಯೆ ಕೆ.ಎ.16/ಇ.ಎಫ್.6938 ಆಗಿದ್ದು, ಸದರಿ ಬೈಕು ಸಣ್ಣ ಕೆಂಚಪ್ಪನ ತಮ್ಮನಿಗೆ ಸೇರಿದ್ದು ಎಂದರೆ, ಸಾಕ್ಷಿ ಬೈಕಿನಲ್ಲಿ ಅಪಘಾತ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ಮಗನಿಗೆ ನಮ್ಮ ಗ್ರಾಮದ ಸಣ್ಣ ಕೆಂಚಪ್ಪ ಬೈಕಿನಲ್ಲಿ ಅತೀ ವೇಗವಾಗಿ ಬಂದು ಡಿಕ್ಕಿಪಡಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಮಂಜುನಾಥ ಬಿನ್ ಮುರುಗೇಂದ್ರಪ್ಪ ರವರು ನೀಡಿದ ದೂರಿನ ಆಧಾರದಲ್ಲಿ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಸಣ್ಣ ಕೆಂಚಪ್ಪನ ತಮ್ಮನಾದ ರವಿರವರಿಗೆ ಸೇರಿದ ಬೈಕಿನ ಕುರಿತು ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ಆ ರೀತಿ ಸೃಷ್ಟಿ ಮಾಡಿದ್ದರು ಎಂದು ಹೇಳುತ್ತಾರೆ. ಸದರಿ ಅಪಘಾತದ ಕುರಿತು ದಿನಾಂಕ 27.06.2018 ರಂದು ನಮ್ಮ ಗ್ರಾಮದ ತಿಮ್ಮಪ್ಪ ರವರ ತೋಟದ ಬಳಿ ಸ್ಥಳ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಅಪಘಾತಪಡಿಸಿದ ಬೈಕನ್ನು ಸಹ ಅಮಾನತ್ತು ಪಂಚನಾಮೆ ಮೂಲಕ ಹೊಳಲ್ಕೆರೆ ಪೊಲೀಸರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೈಕನ್ನು ರವಿ ರವರು ಹೊಳಲ್ಕೆರೆ ಪೊಲೀಸರಿಗೆ ಮುಚ್ಚಳಿಕೆ ಭದ್ರತೆಯನ್ನು ನೀಡಿ ಮಧ್ಯಂತರ ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ.

3. ನಮ್ಮ ಕುಟುಂಬಕ್ಕೆ 2-3 ಎಕರೆ ಜಮೀನು ಇದೆ. ಸಂತೋಷ ನಮಗೆ ಒಬ್ಬನೆ ಮಗ. ನನ್ನ ಪತಿಗೆ ವಯಸ್ಸಾದ ಕಾರಣ ನನ್ನ ಮಗನೆ ನಮಗೆ ಸೇರಿದ ಜಮೀನನ್ನು ವ್ಯವಸಾಯ ಮಾಡಿಕೊಂಡು ಇದ್ದನು ಎಂದರೆ ಸರಿ. ನನ್ನ ಮಗ ವ್ಯವಸಾಯ ಮಾಡುತ್ತಿದ್ದ ಕಾರಣ ಯಾರಿಗೂ ಸಹ ಕೂಲಿಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ.

4. ನನಗೂ ಮತ್ತು 2 ನೇ ಎದುರುದಾರರಿಗೂ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರ ನಡುವೆ ಸಿವಿಲ್ ಪ್ರಕರಣದ ಕುರಿತು ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್ ಮತ್ತು ಟ್ರೈಲರ್ ಸಂಖ್ಯೆ ಗೊತ್ತಿಲ್ಲ. 2 ನೇ ಎದುರುದಾರರ ಬಳಿ ಟ್ರಾಕ್ಟರ್ ಮಾತ್ರ ಇದ್ದು, ಟ್ರೈಲರ್ ಇಲ್ಲ ಎಂದರೆ ಸಾಕ್ಷಿ ನನ್ನ ಮಗ 1 ನೇ ಎದುರುದಾರರ ಬಳಿ ಕೆಲಸಕ್ಕೆ ಹೋಗಿದ್ದು, ಹಾಗಾಗಿ 2 ನೇ ಎದುರುದಾರರಿಗೆ ಸಂಬಂಧಿಸಿದ ಟ್ರೈಲರ್ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್‌ನ ಇಂಜಿನ್ ಸಹ ಒಳಗೊಂಡಿರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ 1 ನೇ ಎದುರುದಾರರನ್ನು ಕೇಳಬೇಕು ಎಂದು ಹೇಳುತ್ತಾರೆ. 2 ನೇ ಎದುರುದಾರರ ಬಳಿ ಟ್ರೈಲರ್ ಇಲ್ಲ ಎಂಬುದು ನನಗೆ ಗೊತ್ತು ಎಂದರೆ ಸರಿಯಲ್ಲ.

5. ನಾನು ಮತ್ತು 1 ನೇ ಎದುರುದಾರರು ಸೇರಿಕೊಂಡು 2 ನೇ ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ಪುನಃ ಮತ್ತೊಂದು ದೂರನ್ನು ನೀಡಿದ್ದೇನೆ ಎಂದರೆ ಸಾಕ್ಷಿ ಆ ಕುರಿತು ನನಗೆ ಗೊತ್ತಿಲ್ಲ, 1 ನೇ ಎದುರುದಾರರಿಗೆ ಮಾಹಿತಿ ಇದೆ ಎಂದು ಹೇಳುತ್ತಾರೆ. 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್ ಈ ಪ್ರಕರಣದ ಅಪಘಾತದಲ್ಲಿ ಒಳಪಡದಿದ್ದಾಗ್ಯೂ ಕೂಡ ಅವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ